# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016–17ನೇ ಸಾಲಿನ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಡಿಯ ವಿವಿಧ ಕಾರ್ಯಕ್ರಮಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:**

1) ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಇವರ ಪತ್ರ ಸಂಖ್ಯೆ: ಯೋ/ಪಿಎಸ್.3/SCP-TSP/ರಾ.ಅ.ಪ/01/2016-17, ದಿನಾಂಕ: 28-04-2016.

2) ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ ದಿನಾಂಕ 15-07-2016 ರ ಸಭೆಯ ನಡವಳಿಗಳು

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ 28-04-2016ರ ಪತ್ರದಲ್ಲಿ ರೇಷ್ಮೆ ಇಲಾಖೆಯ 2016-17ನೇ ಸಾಲಿನ ಅನುಸೂಚಿತ ಜಾತಿ / ಅನುಸೂಚಿತ ಪಂಗಡಗಳ ಯೋಜನೆಗಳಡಿ ಹಂಚಿಕೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮವಾರು ಹಂಚಿಕೆ ಮಾಡಿರುವ ಕ್ರಿಯಾ ಯೋಜನೆಯನ್ನು ಸಲ್ಲಿಸುತ್ತಾ, ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013ರ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ ದಿನಾಂಕ 15-07-2016 ರ ಸಭೆಯಲ್ಲಿ 2016-17ನೇ ಸಾಲಿನ ರೇಷ್ಮೆ ಇಲಾಖೆಯ ಅನುಸೂಚಿತ ಜಾತಿಗಳ ಉಪಯೋಜನೆಯಡಿ ರೂ. 26.58 ಕೋಟಿ ಮತ್ತು ಅನುಸೂಚಿತ ಪಂಗಡಗಳ ಉಪಯೋಜನೆಯಡಿ ರೂ. 12.41 ಕೋಟಿಗಳು ಅಂದರೆ ಒಟ್ಟು ರೂ. 38.99 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 15-07-2016ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ 2016-17ನೇ ಸಾಲಿನ ರೇಷ್ಮೆ ಇಲಾಖೆಯ ಅನುಸೂಚಿತ ಜಾತಿಗಳ ಉಪಯೋಜನೆಯಡಿ ರೂ. 26.58 ಕೋಟಿ ಮತ್ತು ಅನುಸೂಚಿತ ಪಂಗಡಗಳ ಉಪಯೋಜನೆಯಡಿ ರೂ. 12.41 ಕೋಟಿಗಳು ಅಂದರೆ ಒಟ್ಟು ರೂ. 38.99 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವುದರಿಂದ ಸದರಿ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಸರ್ಕಾರವು ನಿರ್ಧರಿಸಿರುವ ಕಾರಣ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ತೋಇ 49 ರೇಕೃವಿ 2016,**
**ಬೆಂಗಳೂರು, ದಿನಾಂಕ : 25-08-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 15-07-2016ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ

ಮು.ತಿ.ನೋ. ...

ಪಂಗಡಗಳ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ 2016-17ನೇ ಸಾಲಿನ ರೇಷ್ಮೆ ಇಲಾಖೆಯ ಅನುಸೂಚಿತ ಜಾತಿಗಳ ಉಪಯೋಜನೆಯಡಿ ರೂ. 26.58 ಕೋಟಿ ಮತ್ತು ಅನುಸೂಚಿತ ಪಂಗಡಗಳ ಉಪಯೋಜನೆಯಡಿ ರೂ. 12.41 ಕೋಟಿಗಳು ಅಂದರೆ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಒಟ್ಟು ರೂ. 38.99 ಕೋಟಿಗಳ ಕ್ರಿಯಾ ಯೋಜನೆಗೆ ಮತ್ತು ಕೆಳಕಂಡ ಸೂಚನೆಗಳನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರವು ಆದೇಶಿಸಿದೆ.

**ಸೂಚನೆಗಳು :**

1) 2016-17ನೇ ಸಾಲಿನಲ್ಲಿ ಇಲಾಖೆಗಳು ಸಲ್ಲಿಸಿದ ಕ್ರಿಯಾ ಯೋಜನೆಗಳಿಗೆ ರಾಜ್ಯ ಅಭಿವೃದ್ಧಿ ಪರಿಷತ್ತಿನಲ್ಲಿ ಅನುಮೋದನೆ ನೀಡಿದ್ದು, ಎಲ್ಲಾ ಇಲಾಖೆಗಳು ತಮಗೆ ಒದಗಿಸಲಾಗಿರುವ ಅನುದಾನವನ್ನು ಉಪಯೋಗಿಸಿಕೊಂಡು ಶೇ. 100 ರಷ್ಟು ಪ್ರಗತಿ ಸಾಧಿಸಬೇಕೆಂದು
2) ಇಲಾಖೆಗಳು ಯಾವುದೇ ಕಾರಣಕ್ಕೂ ಅನುದಾನವನ್ನು ವ್ಯಪಗತವಾಗದಂತೆ ಕ್ರಮವಹಿಸಿ, ಪ್ರಸಕ್ತ ಸಾಲಿನಲ್ಲಿಯೂ ಸಹ ಪೂರ್ಣ ಅನುದಾನವನ್ನು ಖರ್ಚು ಮಾಡತಕ್ಕದ್ದು.
3). ಈ ಉಪ ಯೋಜನೆಗಳಡಿ ಅನುದಾನವನ್ನು ಖರ್ಚು ಮಾಡಲು ವಿಫಲರಾಗುವ ಅಧಿಕಾರಿಗಳ ಮೇಲೆ ಕಾಯ್ದೆ 24 ರಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.
4) ಇಲಾಖೆಯ ಹಿರಿಯ ಅಧಿಕಾರಿಗಳು ಕಾಲಕಾಲಕ್ಕೆ ಯೋಜನೆಯ ಅನುಷ್ಠಾನದ ಬಗ್ಗೆ ಮತ್ತು ಈ ಯೋಜನೆಗಳು ಫಲಾನುಭವಿಗಳಿಗೆ ತಲುಪಿದೆಯೇ ಎಂದು ಸ್ಥಳ ಪರಿಶೀಲನೆ ಮಾಡಿ ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್.ಎಲ್. ಚಿನ್ನಮ್ಮ 22/4
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ),
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಗೆ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ" ಅಂಚೆ ಪೆಟ್ಟಿಗೆ: 5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು, (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ" ಅಂಚೆ ಪೆಟ್ಟಿಗೆ: 5398, ಬೆಂಗಳೂರು-560 001.
3. ಪ್ರಧಾನ ಮಹಾಲೇಖಪಾಲರು, (ಎ&ಇ), ಕರ್ನಾಟಕ, ಹೊಸ ಕಟ್ಟಡ "ಪಾರ್ಕ ಹೌಸ್ ರಸ್ತೆ" ಅಂಚೆ ಪೆಟ್ಟಿಗೆ: 5398, ಬೆಂಗಳೂರು-560 001.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿ ಕಟ್ಟಡ, ಬೆಂಗಳೂರು.

## ಸರ್ಕಾರದ ಆದೇಶ ಸಂಖ್ಯೆ: ತೋಇ 49 ರೇಕೃವಿ 2016, ದಿನಾಂಕ : 25-08-2016 ರ ಅನುಬಂಧ

(ರೂ. ಕೋಟಿಗಳಲ್ಲಿ)

<table>
<tr><th rowspan="2">ಯೋಜನೆ ಮತ್ತು ಲೆಕ್ಕ ಶೀರ್ಷಿಕೆ</th><th colspan="3">ನಿಗದಿಪಡಿಸಿದ ಅನುದಾನ</th><th rowspan="2">ಯೋಜನೆ/ಕಾರ್ಯಕ್ರಮದ ವಿವರ</th></tr>
<tr><th>SCSP (422)</th><th>TSP (423)</th><th>ಒಟ್ಟು</th></tr>
<tr><td>1) ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ 2851-00-107-1-50</td><td>2.02</td><td>0.38</td><td>2.40</td><td>ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಲು ಸೌಲಭ್ಯ ನೀಡಲು</td></tr>
<tr><td>2) ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮ 2851-00-107-1-35</td><td>21.70</td><td>10.85</td><td>32.55</td><td>
<table>
<tr><th>ಕಾರ್ಯಕ್ರಮಗಳು</th><th>SCSP (422)</th><th>TSP (423)</th></tr>
<tr><td>ಹಿಪ್ಪುನೇರಳೆ ಬೆಳೆಸುವ ರೈತರಿಗೆ ಸಹಾಯಧನ</td><td>0.34</td><td>0.34</td></tr>
<tr><td>ಹಿಪ್ಪುನೇರಳೆ ನಾಟಿಗೆ ಸಹಾಯಧನ</td><td>0.13</td><td>0.13</td></tr>
<tr><td>ಹಿಪ್ಪುನೇರಳೆ ತೋಟಕ್ಕೆ ಟ್ರೆಂಚಿಂಗ್/ಮಲ್ಚಿಂಗ್ ಸಹಾಯಧನ</td><td>0.07</td><td>0.07</td></tr>
<tr><td>ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣ</td><td>3.50</td><td>3.51</td></tr>
<tr><td>ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳ ಖರೀದಿಗೆ ಸಹಾಯಧನ</td><td>5.46</td><td>1.80</td></tr>
<tr><td>ಚಾಕಿ ತೋಟ ನಿರ್ವಹಣೆ/ಕಟ್ಟಡ/ಸಲಕರಣೆ ಖರೀದಿ</td><td>0.50</td><td>0.11</td></tr>
<tr><td>ಮೌಂಟಿಂಗ್ ಹಾಲ್ ನಿರ್ಮಾಣ</td><td>0.19</td><td>0.19</td></tr>
<tr><td>ಸೋಂಕು ನಿವಾರಕ ಸರಬರಾಜು</td><td>1.34</td><td>1.50</td></tr>
<tr><td>ರೇಷ್ಮೆ ಗೂಡಿನ ರಕ್ಷಣಾತ್ಮಕ ದರ, ಇತರ ಕಾರ್ಯಕ್ರಮಗಳು</td><td>6.00</td><td>1.02</td></tr>
<tr><td>ರೀಲಿಂಗ್ ಷೆಡ್ ನಿರ್ಮಾಣ</td><td>0.70</td><td>0.20</td></tr>
</table>
</td></tr>
</table>

| | | | | | | |
|---|---|---|---|---|---|---|
| | | | | ಸುಧಾರಿತ/ಇಟಾಲಿಯನ್ ಕಾಟೇಜ್ ಬೇಸಿನ್ | 0.66 | 0.05 |
| | | | | ಮಲ್ಟಿಎಂಡ್/ಸ್ವಯಂಚಾಲಿತ ರೀಲಿಂಗ್ ಘಟಕ ಅಳವಡಿಕೆ | 3.12 | 1.71 |
| | | | | ಬಾಯ್ಲರ್/ಜನರೇಟರ್/ಸೌರಶಕ್ತಿ ವಾಟರ್ ಹೀಟರ್ ಅಳವಡಿಕೆ | 0.16 | 0.03 |
| 3. ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ 4851-00-107-0-01 | 2.61 | 1.06 | 3.67 | 2015-16ನೇ ಸಾಲಿನಲ್ಲಿ ಕಟ್ಟಡ ಕಾಮಗಾರಿಗಳು ಅಪೂರ್ಣವಾಗಿದ್ದು, ಇವುಗಳಿಗೆ ಬಳಕೆ ಮಾಡಲು ಹಾಗೂ 11 + 8 (ಎಸ್‌ಸಿಎಸ್‌ಪಿ + ಟಿಎಸ್‌ಪಿ)=19 ಹೊಸ ಕಾಮಗಾರಿಗಳನ್ನು ಕೈಗೊಳ್ಳಲು | | |
| 4. ರಾಜ್ಯವಲಯ ಯೋಜನೆಗಳು 4851-00-107-1-01 | 0.25 | 0.12 | 0.37 | SCSP ರಡಿ ಶ್ರೀ ಮಹದೇಶ್ವರ ಸಿಲ್ಕ್ ಫಿಲೇಚರ್ ಫ್ಯಾಕ್ಟರಿ ಮತ್ತು ಕೈಗಾರಿಕಾ ಸಹಕಾರ ಸಂಘಗಳ ನಿಯಮಿತ, ಮರದ ದೊಡ್ಡಿ, ರವರಿಗೆ ಸೌಲಭ್ಯ ನೀಡಿಕೆ – ರೂ. 0.25 ಕೋಟಿ<br>TSP ರಡಿ 3 ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು (0.05+0.05+0.02= ರೂ. 0.12 ಕೋಟಿ) | | |
| ಒಟ್ಟು | 26.58 | 12.41 | 38.99 | | | |

(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ),
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.